

# ಕುರುಚಲು ಕಾಡಿನ ಅರಸಿ – ತಂಡಸಿ

ಚಿತ್ರ–ಬರಹ: ಡಾ.ಸ.ನಾ.ಭಟ್

ಬರೀ ಎಲೆ ತೆಗೆದು ಅರೆದು ಹಚ್ಚಿದ್ರೆ ಸಾಕ್ರೀ. ಎಂತಹ ಒಳ ಮುಳ್ಳು ನೆಟ್ಟಿದ್ರೂ ಸೈ. ಸಲೀಸಾಗಿ ಹೊರಕ್ಕೆ ಬರುತ್ತೆ ಎಂದು ಆತ್ಮ ವಿಶ್ವಾಸದ ಮಾತು ನುಡಿದವರು ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲೂಕಿನ ಬರಿಗಾಲ ವೈದ್ಯ ಶ್ರೀ ನಿಂಗಣ್ಣ ಜಿ. ದೊಡ್ಮನಿ. ನಿಜ. ತಂಡಸಿ ಗಿಡದ ಈ ಮಾಹಿತಿ ಮಿಲಿಯನ್ ಡಾಲರ್ ಬೆಲೆ ಬಾಳುವಂಟದ್ದು. ನಮಗಲ್ಲ . ಗಿಡ ಮೂಲಿಕೆ ಬಗ್ಗೆ ಗಂಭೀರವಾಗಿ ಹುಡುಕಾಟ ಮಾಡುವ ಮಂದಿ ನಾವಲ್ಲ. ಕೀವು, ಅಂತ:ಶಲ್ಯ(ಫ಼ಾರಿನ್ ಬಾಡಿ) ಹೊರಹಾಕುವ ತಂಡಸಿ ಎಲೆ ಅರ್ಬುದ ರೋಗದಲ್ಲಿ ಪರಿಣಾಮಕಾರಿ ಆದೀತು. ಆದರೆ ಈ ಕಾನನ ಕುಸುಮಗಳನ್ನು ಬೆಳಕಿಗೆ ತರಲು ನಮ್ಮ ಬಳಿ ಸಮಯವಿಲ್ಲ. ತಂಡಸಿ ಬಯಲು ಸೀಮೆಯ ಕುರುಚಲು ಕಾಡಿನ ದೊಡ್ಡಪೊದೆ. ಕೆಲವೊಮ್ಮೆ ಎರಡು ಮೀಟರ್ ತನಕ ಬೆಳೆವ ಮರ. ಅಡ್ಡಾದಿಡ್ಡಿ ರೆಂಬೆ ಕೊಂಬೆ. ಎಳೆ ರೆಂಬೆಗೆ ನೆತ್ತರುಗೆಂಪಿನ ರಂಗು. ಉದ್ದುದ್ದನೆಯ ಚೂಪು ಮುಳ್ಳು. ತುದಿಕೊಂಬೆಯ ಕವಲುಕವಲಿನ ಹೂಮಂಜರಿಯಲ್ಲಿ ಅರಳುವ ಬಿಳಿ ಬಣ್ಣದ ಪುಟಾಣಿ ಹೂಗಳು. ದಪ್ಪೆಲೆಯ ಅಂಚು ಕೊಂಚ ದಂತುರ ಎಂದರೆ ಹಲ್ಲಿನ ಆಕಾರ. ಗೊಂಚಲಿನಲ್ಲಿ ಕಿರಿಯ ಕಾಯಿಗಳು.

ಜೇವರ್ಗಿ ಪಂಡಿತರಿಗೆ ಇದು ಹಣಮಂತಿ. ತೆಲುಗು ಸೀಮೆಯ ದಂತಿ. ತಿಪಟೂರಿನ ಬಸವಾರಾಧ್ಯರ ಬಾಯಲ್ಲಿದು ತಂಡರಸಿ. ಕ್ರಿ.ಶ.೧೪೬೦ರ ಕನ್ನಡ ಸರ್ಪ ವೈದ್ಯ ಕೋಶ ಖಗೇಂದ್ರ ಮಣಿ ದರ್ಪಣದಲ್ಲಿ ತಂಡಸೆ. ದೊಡ್ಡಬಳ್ಳಾಪುರದ ಪಂಡಿತ ರಾಜ್ ಪ್ರಕಾರ ತನಸಿ. ಹಿಂದಿಯ ಬೈಕುಲ್. ದೇವನಾಗರಿಯ ವಿಕಂಕತ, ಸುದಾತರು. ಯಾರೋ ಒಬ್ಬರು ಇದನ್ನೇ ಮಾಲ್ಕಂಗುನಿ ಎಂದರು. ಹೆಸರಿನಲ್ಲಿ ಏನಿದೆ. ಇದೇ ಗಿಡ ತಾನೇ ಎಂದಿರಾ? ಇಲ್ಲೇ ಅಡಗಿದೆ ಗುಟ್ಟು. ಕನ್ನಡದ ಗಂಗುಂಗೆ ಬಳ್ಳಿ ಮತ್ತು ಈ ಗಿಡದ ಕುಲ ಒಂದೇ. ಸೆಲೇಸ್ಟ್ರೇಸಿ. ಇದರ ಸಸ್ಯನಾಮ ಸೆಲೇಸ್ಟ್ರಸ್ ಮೊಂಟಾನಾ. ಅಂದ ಹಾಗೆ ಗಂಗುಂಗೆಗೆ ಹಿಂದಿ ಹೆಸರು ಮಾಲ್ಕಂಗುನೀ. ಅದಿರದೆಡೆ ಇದರ ಬಳಕೆ ಇತ್ತೇನೋ ಎಂಬ ಊಹೆ ದಿಟ. ಇದಕ್ಕೆ ಒತ್ತು ಸಿಗುವ ಇನ್ನೊಂದು ಅಂಶವಿದೆ. ಬೆಟುಲಿನ್, ಬೀಟ ಅಮೆರಿನ್, ಬೀಟ ಸಿಟೊಸ್ಟಿರಾಲ್ ಎಂಬ ರಾಸಾಯನಿಕ ತತ್ವ ಇವೆರಡು ಗಿಡದ ನಾನಾ ಭಾಗಗಳಲ್ಲಿವೆ.

ತಂಡಸಿ ಎಲೆ ಅರೆದು ಕುಡಿಸಿದರೆ ಬಿಳಿಮುಟ್ಟು ವಾಸಿ ಎಂದ ಜೇವರ್ಗಿ ವೈದ್ಯರ ಮಾತಿಗೆ ಎಲ್ಲ ಪಂಡಿತರು ಒಪ್ಪಿದರು. ಆದರೆ ಇನ್ನೊಬ್ಬ ಪಂಡಿತರು ಇದನ್ನು ಪದೇ ಪದೇ ಗರ್ಭ ಜಾನುವಾರಿಗೆ ಬಳಸುವೆವು ಎಂದಾಗ ವೈದ್ಯಸಮೂಹದಲ್ಲಿ ಭಾರಿ ಕೋಲಾಹಲ. ಇದು ತುಂಬ ಸುಟಿ(ಹೀಟು). ಗರ್ಭಘಾತಿ ಎಂಬ ಒಕ್ಕೊರಲ ಅಭಿಪ್ರಾಯ. ನವೀನರ ಪ್ರಕಾರ ಈ ಎರಡು ಗುಣಗಳು ಒಂದೇ ಗಿಡದಲ್ಲಿ ಇರಲು ಸಾದ್ಯ. ಎಳೆ ಎಲೆ ರಸ ಕುಡಿಸಿ ಮಕ್ಕಳ ಹೊಟ್ಟೆನೋವು, ಭೇದಿ, ಆಮಶಂಕೆ ವಾಸಿ. ಹೇನು ಕೂರೆಗೆ ಇಲ್ಲಿದೆ ಸುಲಭ ಚಿಕಿತ್ಸೆ. ತಂಡಸಿ ತೊಗಟೆ ಅರೆದು ಸಾಸಿವೆ ಎಣ್ಣೆ ಜತೆಗೆ ಕಲಸಿ ತಲೆಗೆ ಹಚ್ಚಿರಿ. ಹೇನು, ಕೂರೆ, ಹೊಟ್ಟು ನಾಶ. ಮೈದಾನದ ಈ ಗಿಡ ನೀವು ಕಂಡರೆ ಖಂಡಿತ ಗುರುತುಹಿಡಿಯುವಿರಲ್ಲ.

***